# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 601 |
| ಸದಸ್ಯರ ಹೆಸರು | : | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21-02-2023 |
| ಉತ್ತರಿಸುವ ಸಚಿವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಲ್ಲಿ ಬಾಲ್ಯವಿವಾಹವನ್ನು ತಡೆಗಟ್ಟಲು ದೂರುದಾರರು ತಕ್ಷಣ ಯಾರನ್ನು ಸಂಪರ್ಕಿಸಲಾಗಿದೆ: ರಾಜ್ಯದಲ್ಲಿ ದಾಖಲಾಗಿರುವ ಬಾಲ್ಯ ವಿವಾಹ ಪ್ರಕರಣಗಳು ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ 5 ವರ್ಷಗಳಲ್ಲಿ ಬಾಲ್ಯ ವಿವಾಹವನ್ನು ತಡೆಗಟ್ಟಲು ದೂರುದಾರರು ತಕ್ಷಣ ಮಕ್ಕಳ ಸಹಾಯವಾಣಿ (1098), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಅಧಿಕಾರಿಗಳು, ನಿರ್ದೇಶನಾಲಯದ ಬಾಲ್ಯ ವಿವಾಹ ನಿಷೇಧ ಕೋಶ, ಪೊಲೀಸ್ ಮತ್ತು ಇತರೆ ಭಾಗೀದಾರ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿರುತ್ತಾರೆ.<br><br>ಕಳೆದ 5 ವರ್ಷಗಳಲ್ಲಿ ಬಾಲ್ಯವಿವಾಹ ಪ್ರಕರಣಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ. |
| ಆ) | ಬಾಲ್ಯ ವಿವಾಹವನ್ನು ತಡೆಗಟ್ಟುವಲ್ಲಿ ಸಂಬಂಧಪಟ್ಟ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಿರ್ಲಕ್ಷ್ಯ ವಹಿಸಿರುವ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು; (ಪ್ರಕರಣವಾರು ವಿವರ ನೀಡುವುದು) | ಬಂದಿರುವುದಿಲ್ಲ.<br><br>ಬಾಲ್ಯವಿವಾಹ ಕುರಿತಂತೆ ದೂರು ಸ್ವೀಕೃತವಾದ ಕೂಡಲೇ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಭಾಗೀದಾರ ಇಲಾಖೆಗಳ ಬಾಲ್ಯವಿವಾಹ ನಿಷೇದಾಧಿಕಾರಿಗಳ ಸಹಯೋಗದೊಂದಿಗೆ ಬಾಲ್ಯವಿವಾಹಗಳನ್ನು ತಡೆಯಲು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ. ಪೊಲೀಸ್ ಇಲಾಖೆಯ ಅಧಿಕಾರಿಗಳಿಂದ ಪ್ರಕರಣ ದಾಖಲಿಸುವ ಸಂಬಂಧ ಅಗತ್ಯ ಸಹಕಾರ ಪಡೆಯಲಾಗುತ್ತಿದೆ. |
| ಇ. | ಬಾಲ್ಯ ವಿವಾಹ ತಡೆಯುವ ಸಂಬಂಧ ಬರುತ್ತಿರುವ ದೂರುಗಳ ಸಂಖ್ಯೆ ಹೆಚ್ಚಾಗಿದ್ದು, ಇದಕ್ಕನುಗುಣವಾಗಿ ಎಫ್. ಐ.ಆರ್. ಗಳನ್ನು ದಾಖಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಬಾಲ್ಯವಿವಾಹವನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು) | ಬಂದಿರುವುದಿಲ್ಲ.<br><br>ಬಾಲ್ಯವಿವಾಹ ಪ್ರಕರಣಗಳ ಕುರಿತಂತೆ, ದೂರು ದಾಖಲಾದ ಕೂಡಲೇ ಬಾಲ್ಯವಿವಾಹ ನಿಷೇದಾಧಿಕಾರಿಗಳು ಬಾಲ್ಯವಿವಾಹ ತಡೆಗೆ ಕ್ರಮಕೈಗೊಳ್ಳುತ್ತಿದ್ದು, ತಡವಾಗಿ ಪತ್ತೆಯಾದ ಪ್ರಕರಣಗಳಲ್ಲಿ ಕಡ್ಡಾಯವಾಗಿ FIR ದಾಖಲಿಸುವ ಕುರಿತಂತೆ ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಆಗ್ಗಿಂದ್ದಾಗೆ ಜಿಲ್ಲೆಗಳ ಉಪನಿರ್ದೇಶಕರುಗಳಿಗೆ ನಿರ್ದೇಶನ ನೀಡಿ ಅನುಸರಣೆ ಮಾಡಲಾಗುತ್ತಿದೆ.<br><br>ಬಾಲ್ಯವಿವಾಹವನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಕೈಗೊಂಡಿರುವ ಕ್ರಮಗಳನ್ನು ಅನುಬಂಧ-2ರಲ್ಲಿ ನೀಡಿದೆ. |

**ಸಂಖ್ಯೆ:ಮಮಇ 26 ಮಮಅ 2023**

Halappa BA

**(ಆಚಾರ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು.

## ಅನುಬಂಧ-1

## ಕಳೆದ 5 ವರ್ಷಗಳ ಬಾಲ್ಯವಿವಾಹ ಪ್ರಕರಣಗಳ ಮಾಹಿತಿ

### ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ವಿ. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 560 (601) ಕ್ಕೆ ಉತ್ತರ

| ಕ್ರ. ಸಂ | ಜಿಲ್ಲೆಯ ಹೆಸರು | 2017-18 | | | | 2018-19 | | | | 2019-20 | | | | 2020-21 | | | | 2021-22 | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 |
| 1 | ಬಾಗಲಕೋಟೆ | 25 | 25 | 0 | 0 | 43 | 36 | 7 | 0 | 65 | 60 | 5 | 0 | 113 | 95 | 18 | 10 | 177 | 138 | 39 | 39 |
| 2 | ಬೆಂಗಳೂರು (ಗ್ರಾ) | 66 | 45 | 21 | 19 | 8 | 7 | 1 | 1 | 5 | 5 | 0 | 0 | 74 | 66 | 8 | 8 | 59 | 51 | 8 | 8 |
| 3 | ಬೆಂಗಳೂರು (ನ) | 115 | 104 | 11 | 8 | 27 | 22 | 5 | 2 | 20 | 17 | 3 | 2 | 43 | 34 | 8 | 8 | 51 | 38 | 13 | 12 |
| 4 | ಬೆಳಗಾವಿ | 52 | 39 | 13 | 2 | 150 | 138 | 12 | 0 | 144 | 132 | 12 | 6 | 187 | 169 | 18 | 13 | 140 | 124 | 16 | 16 |
| 5 | ಬಳ್ಳಾರಿ | 72 | 64 | 8 | 8 | 107 | 105 | 2 | 2 | 68 | 65 | 3 | 3 | 261 | 249 | 12 | 12 | 207 | 190 | 17 | 17 |
| 6 | ಬೀದರ್ | 136 | 132 | 4 | 0 | 48 | 43 | 5 | 1 | 86 | 86 | 0 | 0 | 72 | 69 | 3 | 1 | 42 | 42 | 0 | 0 |
| 7 | ವಿಜಯಪುರ | 27 | 27 | 0 | 0 | 68 | 67 | 1 | 1 | 58 | 58 | 0 | 0 | 111 | 110 | 1 | 0 | 82 | 55 | 27 | 27 |
| 8 | ಚಾಮರಾಜನಗರ | 32 | 32 | 0 | 0 | 21 | 21 | 0 | 0 | 25 | 22 | 3 | 3 | 87 | 86 | 1 | 1 | 72 | 67 | 5 | 5 |
| 9 | ಚಿಕ್ಕಬಳ್ಳಾಪುರ | 13 | 11 | 2 | 1 | 56 | 49 | 7 | 4 | 113 | 104 | 9 | 9 | 140 | 128 | 13 | 13 | 136 | 109 | 27 | 27 |
| 10 | ಚಿಕ್ಕಮಗಳೂರು | 33 | 32 | 1 | 1 | 24 | 22 | 2 | 2 | 42 | 37 | 5 | 5 | 109 | 94 | 15 | 11 | 104 | 87 | 17 | 17 |
| 11 | ಚಿತ್ರದುರ್ಗ | 72 | 63 | 9 | 4 | 57 | 54 | 3 | 0 | 57 | 55 | 2 | 2 | 132 | 128 | 4 | 4 | 137 | 128 | 9 | 8 |
| 12 | ದಕ್ಷಿಣ ಕನ್ನಡ | 7 | 6 | 1 | 1 | 11 | 9 | 2 | 0 | 15 | 11 | 4 | 4 | 21 | 20 | 1 | 1 | 12 | 11 | 1 | 1 |
| 13 | ದಾವಣಗೆರೆ | 15 | 14 | 1 | 1 | 72 | 70 | 2 | 1 | 60 | 59 | 1 | 1 | 79 | 72 | 7 | 7 | 73 | 67 | 6 | 6 |
| 14 | ಧಾರವಾಡ | 48 | 43 | 5 | 0 | 9 | 9 | 0 | 0 | 13 | 11 | 2 | 1 | 11 | 11 | 0 | 0 | 32 | 22 | 10 | 10 |
| 15 | ಗದಗ | 91 | 85 | 6 | 0 | 22 | 22 | 0 | 0 | 32 | 31 | 1 | 1 | 60 | 57 | 3 | 3 | 48 | 46 | 2 | 2 |
| 16 | ಕಲಬುರ್ಗಿ | 75 | 70 | 5 | 3 | 125 | 118 | 7 | 0 | 120 | 110 | 10 | 10 | 134 | 130 | 4 | 1 | 171 | 165 | 6 | 3 |
| 17 | ಹಾಸನ | 41 | 37 | 4 | 3 | 40 | 38 | 2 | 0 | 30 | 30 | 0 | 0 | 160 | 121 | 39 | 29 | 106 | 67 | 39 | 31 |
| 18 | ಹಾವೇರಿ | 154 | 150 | 4 | 6 | 24 | 23 | 1 | 0 | 31 | 31 | 0 | 0 | 52 | 52 | 0 | 0 | 71 | 71 | 0 | 0 |
| 19 | ಕೊಡಗು | 55 | 55 | 0 | 0 | 10 | 8 | 2 | 0 | 20 | 19 | 1 | 1 | 10 | 8 | 2 | 1 | 10 | 7 | 3 | 3 |
| 20 | ಕೋಲಾರ | 19 | 19 | 0 | 0 | 17 | 17 | 0 | 0 | 38 | 37 | 1 | 1 | 94 | 93 | 1 | 2 | 74 | 68 | 6 | 6 |
| 21 | ಕೊಪ್ಪಳ | 4 | 4 | 0 | 0 | 98 | 92 | 6 | 6 | 275 | 270 | 5 | 3 | 119 | 111 | 8 | 4 | 67 | 67 | 0 | 0 |
| 22 | ಮಂಡ್ಯ | 24 | 24 | 0 | 0 | 47 | 29 | 18 | 11 | 58 | 30 | 28 | 26 | 76 | 42 | 34 | 28 | 142 | 66 | 76 | 70 |
| 23 | ಮೈಸೂರು | 22 | 21 | 1 | 0 | 73 | 69 | 4 | 5 | 91 | 84 | 7 | 7 | 277 | 246 | 31 | 31 | 238 | 205 | 33 | 33 |
| 24 | ರಾಯಚೂರು | 10 | 7 | 3 | 3 | 31 | 30 | 1 | 0 | 41 | 39 | 2 | 2 | 95 | 77 | 18 | 17 | 147 | 135 | 12 | 4 |
| 25 | ರಾಮನಗರ | 24 | 24 | 0 | 0 | 37 | 30 | 7 | 2 | 90 | 59 | 31 | 18 | 129 | 109 | 20 | 7 | 92 | 81 | 11 | 9 |
| 26 | ಶಿವಮೊಗ್ಗ | 7 | 7 | 0 | 0 | 55 | 42 | 13 | 3 | 65 | 48 | 17 | 17 | 125 | 107 | 18 | 18 | 94 | 76 | 18 | 18 |
| 27 | ತುಮಕೂರು | 46 | 45 | 1 | 1 | 50 | 45 | 5 | 5 | 55 | 51 | 4 | 4 | 130 | 123 | 7 | 7 | 111 | 100 | 11 | 11 |
| 28 | ಉಡುಪಿ | 26 | 24 | 2 | 0 | 2 | 1 | 1 | 1 | 1 | 1 | 0 | 0 | 1 | 1 | 0 | 0 | 0 | 0 | 0 | 0 |
| 29 | ಉತ್ತರ ಕನ್ನಡ | 38 | 38 | 0 | 0 | 9 | 7 | 2 | 1 | 12 | 12 | 0 | 0 | 21 | 20 | 1 | 1 | 16 | 15 | 1 | 1 |
| 30 | ಯಾದಗಿರಿ | 4 | 4 | 0 | 0 | 53 | 52 | 1 | 0 | 49 | 49 | 0 | 0 | 84 | 83 | 1 | 1 | 108 | 103 | 5 | 5 |
| 31 | ವಿಜಯನಗರ | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| **Total** | | **1353** | **1251** | **102** | **61** | **1394** | **1275** | **119** | **48** | **1779** | **1623** | **156** | **130** | **3007** | **2711** | **296** | **239** | **2819** | **2401** | **418** | **389** |

## ಅನುಬಂಧ 2

**ಬಾಲ್ಯವಿವಾಹ ತಡೆಗೆ ಸರ್ಕಾರದಿಂದ ಕೈಗೊಳ್ಳಲಾದ ಕ್ರಮಗಳು ಈ ಕೆಳಗಿನಂತಿವೆ.**

- ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಹಾಗೂ ಬಾಲ್ಯವಿವಾಹ ನಿಷೇಧ (ಕರ್ನಾಟಕ) ನಿಯಮಗಳು 2014ನ್ನು ರಾಜ್ಯಾದಂತ ಜಾರಿಗೊಳಿಸಲಾಗುತ್ತಿದೆ.

- ಬಾಲ್ಯವಿವಾಹ ನಿಷೇಧ ಕಾಯ್ದೆ-2006ನ್ನು ಬಲಪಡಿಸಲು ಕರ್ನಾಟಕ ರಾಜ್ಯವು ಕಾಯ್ದೆಗೆ ತಿದ್ದುಪಡಿಯನ್ನು ತಂದಿದ್ದು,ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಅಧಿನಿಯಮ-2016ರನ್ನು ದಿ:03.03.2018ರಿಂದ ಜಾರಿಗೆ ತಂದಿರುತ್ತದೆ.

- ಬಾಲ್ಯ ವಿವಾಹ ನಿಷೇಧ ಕರ್ನಾಟಕ ನಿಯಾವಳಿಗಳು-2014ನ್ನು ಪರಿಷ್ಕರಣೆ ಮಾಡಲು ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯ, ಬೆಂಗಳೂರು ರವರ ಸಹಯೋಗದೊಂದಿಗೆ (NLSU) ಕ್ರಮ ಕೈಗೊಳ್ಳಲಾಗುತ್ತಿದೆ.

- ಬಾಲ್ಯವಿವಾಹ ನಿಷೇಧ ಕಾಯ್ದೆಯ ಅನುಷ್ಠಾನಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಒಳಗೊಂಡಂತೆ ಪ್ರಮುಖ 10 ಇಲಾಖೆಗಳಲ್ಲಿ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸುತ್ತಿರುವ (ರಾಜ್ಯ/ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯತ್ ವ್ಯಾಪ್ತಿಯ) 58,522 ಅಧಿಕಾರಿಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿ ಅವರ ಅಧಿಕಾರದ ವ್ಯಾಪ್ತಿಯನ್ನು ನಿಗದಿ ಪಡಿಸಿ ವಿವಿಧ ಹಂತಗಳಲ್ಲಿ ನೇಮಿಸಿ 2018ರಲ್ಲಿ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಅವರ ಪ್ರಕಾರ್ಯ ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಲಾಗಿದೆ, 10 ವಿವಿಧ ಇಲಾಖೆಗಳ ನಿರ್ದಿಷ್ಟ ಪಾತ್ರಗಳ ಬಗ್ಗೆ ಸ್ಪಷ್ಟಪಡಿಸಲಾಗಿದೆ.

- 2022-23ನೇ ಸಾಲಿನಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ಭಾಗೀದಾರರ ಇಲಾಖೆಗಳ ಬಾಲ್ಯವಿವಾಹ ನಿಷೇದಾಧಿಕಾರಿಗಳಿಗೆ ಅವರ ಕರ್ತವ್ಯ ನಿರ್ವಹಿಸಲು ಅನುಕೂಲವಾಗುವಂತೆ ಸಿದ್ಧಪಡಿಸಲಾಗಿರುವ ಕ್ರಮಬದ್ಧ ಕಾರ್ಯಾವಿಧಾನ (SOP) ಕುರಿತಂತೆ ತರಬೇತಿಗಾಗಿ ಪ್ರತಿ ಜಿಲ್ಲೆಗೆ ರೂ. 50,000/-ಗಳಂತೆ ಒಟ್ಟು ರೂ. 15,50,000/-ಗಳ ಅನುದಾನವನ್ನು 31 ಜಿಲ್ಲೆಗಳಿಗೆ ಬಿಡುಗಡೆ ಮಾಡಿ ತರಬೇತಿ ಹಮ್ಮಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

- 2022-23ನೇ ಸಾಲಿನಲ್ಲಿ ಆದೇಶ ಸಂಖ್ಯೆ: ಮಮಅಇ: ಬಾವಿನಿಕೋ: ಆಯವ್ಯಯ: 01: 2022-23 ದಿನಾಂಕ:05.01.2023ರಲ್ಲಿ ಬಾಲ್ಯವಿವಾಹ ನಿಷೇಧ ಕುರಿತು ಯುವಜನಾಂಗದಲ್ಲಿ ಅರಿವು ಮೂಡಿಸಲು ವಿವಿಧ ಇಲಾಖೆಗಳ ಸಹಕಾರದೊಂದಿಗೆ ಯುವ ಮೇಳ ಹಾಗೂ ಇತರ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ರಾಜ್ಯದ 4 ವಿಭಾಗಗಳಲ್ಲಿನ ಬೆಳಗಾವಿ, ಚಾಮರಾಜನಗರ, ಯಾದಗಿರಿ ಮತ್ತು ತುಮಕೂರು ಜಿಲ್ಲೆಗಳಿಗೆ ರೂ. 5.00 ಲಕ್ಷಗಳಂತೆ ಒಟ್ಟು ರೂ. 20.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

- ಸುರಕ್ಷಿಣಿ:- ಬಾಲ್ಯ ವಿವಾಹದಿಂದ ಮಕ್ಕಳ ರಕ್ಷಣೆ ಹಾಗೂ ಅನುಸರಣಾ ಮಾಹಿತಿ ಬಾಲ್ಯವಿವಾಹ ನಿಷೇಧ ಕಾಯ್ದೆಯ ಸಮರ್ಪಕ ಅನುಷ್ಠಾನಕ್ಕಾಗಿ ಹಾಗೂ ಮೇಲ್ವಿಚಾರಣೆಗಾಗಿ ಸುರಕ್ಷಿಣಿ ಎಂಬ ವೆಬ್ ಪೋರ್ಟಲ್ ನ್ನು NIC ಸಹಯೋಗದಿಂದ ಅಭಿವೃದ್ಧಿಪಡಿಸಲಾಗಿದ್ದು, ಸದರಿ ವೆಬ್ ಪೋರ್ಟಲ್ ಕುರಿತು ಪ್ರಕರಣಗಳ ದತ್ತಾಂಶ ಸಂಗ್ರಹಣೆಗೆ ಹಾಗೂ ಮೇಲ್ವಿಚಾರಣೆಗೆ ಅನುಕೂಲವಾಗುತ್ತಿದ್ದು, ಸದ್ಯದಲ್ಲಿಯೇ ಚಾಲನೆಗೆ ಕ್ರಮ ವಹಿಸಲಾಗುತ್ತಿದೆ.

- ಬಾಲ್ಯವಿವಾಹವನ್ನು ತಡೆಗಟ್ಟುವ ಉದ್ದೇಶದಿಂದ ಕೊಪ್ಪಳ ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ಸ್ಫೂರ್ತಿ ಯೋಜನೆಯನ್ನು ರಾಜ್ಯದ ಇತರೆ 5 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಕಲಬುರ್ಗಿ, ರಾಯಚೂರು ಮತ್ತು ವಿಜಯಪುರ ಜಿಲ್ಲೆಗಳ 11 ತಾಲ್ಲೂಕು(ಹುನಗುಂದ, ಸವದತ್ತಿ, ಗೋಕಾಕ್, ಹುಕ್ಕೇರಿ, ಚಿಂಚೋಳಿ, ಜೇವರ್ಗಿ, ಲಿಂಗಸುಗೂರು, ದೇವದುರ್ಗ, ಮುದ್ದೇಬಿಹಾಳ, ಇಂಡಿ) ಗಳಲ್ಲಿ ಸ್ಫೂರ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ.